# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 123 | Pages. 2 | Date: 15-03-2025, SATURDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 123 - ಪುಟಗಳು : 2 - 15 ಮಾರ್ಚ್ 2025 ಶನಿವಾರ | Ph: 8762954248 | ದರ : ₹1


# ಇಂದಿನಿಂದ ಪುಂಡಾನೆ ಸೆರೆ ಕಾರ್ಯಾಚರಣೆ

## ತೋಟದಿಂದ ಮನೆಗೆ ಬರುವಾಗ ದಾಳಿ | ಕಾಡಾನೆ ದಾಳಿಗೆ ಮಹಿಳೆ ಬಲಿ

### 2 ತಿಂಗಳಲ್ಲಿ ನಾಲ್ವರ ಸಾವು | ಸ್ಥಳೀಯರ ಆಕ್ರೋಶಕ್ಕೆ ಅಧಿಕಾರಿಗಳು ತಬ್ಬಿಬ್ಬು | ಜಿಲ್ಲೆಗೆ ಎಪಿಸಿಸಿಎಫ್ ದರ್ಜೆಯ ಅಧಿಕಾರಿ ನೇತೃತ್ವದ ತಂಡ

■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ಕೋಗೋಡು ಗ್ರಾಮದಲ್ಲಿ ಶುಕ್ರವಾರ ಕಾಫಿ ತೋಟದಲ್ಲಿ ಕೆಲಸ ಮುಗಿಸಿ ಮನೆಗೆ ಬರುತ್ತಿದ್ದ ಮಹಿಳೆ ಮೇಲೆ ಕಾಡಾನೆ ದಾಳಿ ನಡೆಸಿ ಹತ್ಯೆಗೈದಿದ್ದು ಕೇವಲ ಎರಡು ತಿಂಗಳಲ್ಲಿ ದಾಳಿಯಿಂದ ನಾಲ್ವರು ಮೃತಪಟ್ಟಿದ್ದಾರೆ.

ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ಸುಶೀಲಮ್ಮ (58) ಮೃತರು. ಸೊಂಡಿಲಿನಿಂದ ಎತ್ತಿ ಎಸೆದು, ತಲೆ ಭಾಗವನ್ನು ತುಳಿದು ಭೀಕರವಾಗಿ ಕೊಂದು ಹಾಕಿದೆ. ತಾಲ್ಲೂಕಿನ ಪುಟ್ಟಯ್ಯ, ದ್ಯಾವಮ್ಮ, ಅನಿಲ್‌ರಾಜ್ ಅರಸು ಬಳಿಕ ಸುಶೀಲಮ್ಮ ಅವರು ಪ್ರಾಣ ಕಾಡಾನೆ ಆಕ್ರೋಶಕ್ಕೆ ಬಲಿಯಾಗಿದ್ದಾರೆ. ಮಹಿಳೆ ಮೃತಪಟ್ಟ ವಿಷಯ ತಿಳಿಯುತ್ತಿದ್ದಂತೆ ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಸಿ. ಸತ್ಯಭಾಮ, ತಹಶೀಲ್ದಾರ್ ಎಂ. ಮಮತಾ ಸ್ಥಳಕ್ಕೆ ಆಗಮಿಸಿದರು.

**ರಸ್ತೆ ಬಂದ್ ಮಾಡಿ ಪ್ರತಿಭಟನೆ:** ಕಾಡಾನೆ ಹಾವಳಿಯಿಂದ ಅನಾಹುತ ಹೆಚ್ಚುತ್ತಿದ್ದರೂ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುತ್ತಿಲ್ಲ. ಸ್ಥಳಕ್ಕೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಬರಬೇಕೆಂದು ಆಗ್ರಹಿಸಿ ಸ್ಥಳೀಯರು ಮೂಡಿಗೆರೆ-ಬೇಲೂರು ರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಿದರು. ಟೈರ್ ಸುಟ್ಟು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಕೆಎಸ್‌ಆರ್‌ಟಿಸಿ ಬಸ್ ಚಾಲನೆಗೆ ಮುಂದಾದ ಚಾಲಕನ ವಿರುದ್ಧ ಪ್ರತಿಭಟನಾಕಾರರು ಹರಿಹಾಯ್ದರು. ಹೀಗಾಗಿ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆದು, ಬಸ್ ಮುಂದೆ ಹೋಗಲು ಬಿಡದ ನೂರಾರು ಪ್ರತಿಭಟನಾಕಾರರು ವಾಹನಗಳ ಸಂಚಾರಕ್ಕೆ ತಡೆಯೊಡ್ಡಿದರು. ಅದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಆಗಮಿಸುತ್ತಿದ್ದಂತೆ ಜಿಲ್ಲಾಧಿಕಾರಿ ವಿರುದ್ಧ ಘೋಷಣೆ ಕೂಗಿದರು. ಜಿಲ್ಲಾಧಿಕಾರಿ, ತಹಶೀಲ್ದಾರ್ ಮಮತಾ ಅವರು ಉತ್ತರಿಸಲಾಗದೆ ಸುಮ್ಮನೆ ನಿಂತರು. ಸ್ಥಳೀಯರನ್ನು ಸಮಾಧಾನಪಡಿಸಲು ಪೊಲೀಸರು ಮುಂದಾದಾಗ ನೂಕಾಟ ತಳ್ಳಾಟ ಆಯಿತು.

**ಜನರ ಆಕ್ರೋಶ ಶಮನ:** ಪ್ರತಿಭಟನಾಕಾರರನ್ನು ಸಮಾಧಾನಪಡಿಸಿದ ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಶನಿವಾರದಿಂದ ಕಾರ್ಯಾಚರಣೆ ಆರಂಭಿಸುತ್ತೇವೆ. ನೀವು ಬೇಲೂರು ಬಂದ್ ಮಾಡಿದರೂ, ನನ್ನ ಸಂಪೂರ್ಣ ಬೆಂಬಲವಿದೆ. ಸಮಸ್ಯೆ ಬಗೆಹರಿಯದಿದ್ದರೆ, ನಿಮ್ಮ ಮುಂದೆ ನಾನು ಮತ್ತು ಜಿಲ್ಲಾಡಳಿತ ಶರಣಾಗುತ್ತೇವೆ ಎಂದಾಗ ಗ್ರಾಮಸ್ಥರು ಪ್ರತಿಭಟನೆ ಹಿಂಪಡೆದರು.

ಇದಾದ ಬಳಿಕ ಜಿಲ್ಲಾಧಿಕಾರಿ ಸತ್ಯಭಾಮ, ತಹಶೀಲ್ದಾರ್, ಎಸ್‌ಪಿ ಮತ್ತು ಇತರ ಅಧಿಕಾರಿಗಳು ಮೃತ ಮಹಿಳೆ ಸುಶೀಲಮ್ಮ ಅವರ ಮನೆಗೆ ನಡೆದುಕೊಂಡು ಹೋಗಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಸರ್ಕಾರದ ಭರವಸೆ ಈಡೇರಬೇಕೆಂದು ಜನರು ನಿರೀಕ್ಷೆ ಮಾಡುತ್ತಿದ್ದಾರೆ. ಕಾಡಾನೆ ಉಪಟಳವನ್ನು ತಡೆಗಟ್ಟಲು ಈ ಬಾರಿ ಗಂಭೀರ ನಿರ್ಧಾರ ಕೈಗೊಳ್ಳಬೇಕಿದೆ ಎಂದು ಗ್ರಾಮಸ್ಥರು ಒತ್ತಾಯಿಸಿದರು. ಈಗ ಎಲ್ಲರ ಕಣ್ಣುಗಳು ಮಾ. 15 ರಿಂದ ಆರಂಭವಾಗಲಿರುವ ಕಾಡಾನೆ ಸೆರೆ ಕಾರ್ಯಾಚರಣೆಯ ಮೇಲೆ ನೆಟ್ಟಿವೆ.



### ಮಾತು ತಪ್ಪಿದರೆ ಶರಣಾಗುವೆ: ಸಂಸದ ಶ್ರೇಯಸ್ ಪಟೇಲ್

ಕಾಡಾನೆ ದಾಳಿಯಲ್ಲಿ ಮೃತಪಟ್ಟ ಮಹಿಳೆಯ ಶವವನ್ನು ಮೇಲೆತ್ತಲು ಅವಕಾಶ ನೀಡದೆ ಪ್ರತಿಭಟನೆಯಲ್ಲಿ ತೊಡಗಿದ್ದ ಸ್ಥಳೀಯರ ಮನವೊಲಿಸುವಲ್ಲಿ ಸಂಸದ ಶ್ರೇಯಸ್ ಪಟೇಲ್ ಯಶಸ್ವಿಯಾಗಿದ್ದು ಶನಿವಾರದಿಂದಲೇ ಕಾಡಾನೆ ಸೆರೆ ಕಾರ್ಯಾಚರಣೆ ಆರಂಭಿಸುವುದಾಗಿ ಭರವಸೆ ನೀಡಿದರು.



ಸಂಭಾವ್ಯ ಪರಿಸ್ಥಿತಿ ನಿರ್ವಹಿಸಲು ಸ್ಥಳಕ್ಕೆ ಧಾವಿಸಿದ ಪ್ರತಿನಿಧಿಗಳು ಪ್ರತಿಭಟನೆಯ ತೀವ್ರತೆಯನ್ನು ಮನಗಂಡು ಹಾಸನ ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಸಿ. ಸತ್ಯಭಾಮ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಹಮದ್ ಸುಜೀತಾ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಏಡುಕುಂಡಲು, ಡಿಸಿಎಫ್ ಸೌರಭ್‌ಕುಮಾರ್ ಸ್ಥಳಕ್ಕೆ ಭೇಟಿ ನೀಡಿದರು.

ಈ ವೇಳೆ ಸಂಸದ ಶ್ರೇಯಸ್ ಪಟೇಲ್ ಪ್ರತಿಭಟನಾಕಾರರ ಮನವಿಯನ್ನು ಆಲಿಸಲು ಮುಂದಾದರೂ, ಗ್ರಾಮಸ್ಥರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾಕಾರರು ಅರಣ್ಯ ಸಚಿವರು ಸ್ಥಳಕ್ಕೆ ಬರಬೇಕು ಎಂದು ಪಟ್ಟುಹಿಡಿದು, ಸಚಿವರ ಭೇಟಿ ನೀಡಿ ಸಮಸ್ಯೆ ಬಗೆಹರಿಸುವವರೆಗೂ ಮೃತದೇಹವನ್ನು ಸ್ಥಳದಿಂದ ಕದಲಿಸಲು ನಿರಾಕರಿಸಿದರು. ಸ್ಥಳೀಯರು ಕಾಡಾನೆ ದಾಳಿಗಳಿಗೆ ಅಂತ್ಯ ಹಾಡಬೇಕು, ಶೀಘ್ರವೇ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳದಿಂದಲೇ ಅರಣ್ಯ ಸಚಿವರಿಗೆ ಕರೆ ಮಾಡಿದ ಸಂಸದ ಪರಿಸ್ಥಿತಿಯ ಗಂಭೀರತೆ ಅರಿತು ಸಂಸದ ಶ್ರೇಯಸ್ ಪಟೇಲ್ ಪ್ರತಿಭಟನಾ ಸ್ಥಳದಿಂದಲೇ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ಕರೆ ಮಾಡಿ ತುರ್ತು ಸಂಭಾಷಣೆ ನಡೆಸಿ ಪರಿಸ್ಥಿತಿ ಕೈಮೀರುತ್ತಿರುವ ಬಗ್ಗೆ ಮನವರಿಕೆ ಮಾಡಿದರು. ತಕ್ಷಣವೇ ಪುಂಡಾನೆಗಳ ನಿಯಂತ್ರಣ ಕ್ರಮ ಆರಂಭಿಸಲೇಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಒಪ್ಪಿದ ಅರಣ್ಯ ಸಚಿವರು ಕಾಡಾನೆ ಸೆರೆ ಕಾರ್ಯಾಚರಣೆ ಆರಂಭಿಸಲಾಗುವುದು ಎಂದು ಭರವಸೆ ನೀಡಿದರು.

ಮತ್ತಿಗೋಡು ಮತ್ತು ದುಬಾರೆ ಆನೆ ಶಿಬಿರಗಳಿಂದ ಸಾಕಾನೆಗಳನ್ನು ಕರೆಸಿ, ಪುಂಡಾನೆಗಳನ್ನು ಸೆರೆ ಹಿಡಿಯಲಾಗುತ್ತದೆ. ಹಂತಹಂತವಾಗಿ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದರು.

### ಸಚಿವ ಖಂಡ್ರೆ, ಸಂತಾಪ

ಕಾಡಾನೆ ದಾಳಿಯಿಂದ ಮಹಿಳೆ ಮೃತಪಟ್ಟಿರುವುದು ನೋವಿನ ಸಂಗತಿ, ಈ ದುಃಖದ ಸಂದರ್ಭದಲ್ಲಿ ಸರ್ಕಾರ ಅವರ ಕುಟುಂಬದ ಜೊತೆ ನಿಲ್ಲುತ್ತದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸಂತಾಪ ಸೂಚಿಸಿದ್ದಾರೆ.

ಮೃತ ಮಹಿಳೆಯ ಆತ್ಮಕ್ಕೆ ಶಾಂತಿ ದೊರಕಲಿ, ಅವರ ಕುಟುಂಬಕ್ಕೆ ನೋವು ತಾಳಿಕೊಳ್ಳುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಿರುವ ಅವರು, ಮಾನವ-ವನ್ಯಜೀವಿ ಸಂಘರ್ಷ ನಿಯಂತ್ರಿಸಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ. ಸರ್ಕಾರ ಸಂವೇದನಾತ್ಮಕವಾಗಿದೆ. ಜನರು ಮಳೆಗಾಲ ಆರಂಭವಾಗುವವರೆಗೆ ಹೆಚ್ಚಿನ ಎಚ್ಚರಿಕೆ ವಹಿಸಬೇಕು ಎಂದು ಮನವಿ ಮಾಡಿದ್ದಾರೆ.

ಎಪಿಸಿಸಿಎಫ್ ದರ್ಜೆಯ ಅಧಿಕಾರಿ ನೇತೃತ್ವದ ತಂಡವನ್ನು ಹಾಸನ ಜಿಲ್ಲೆಗೆ ಕಳುಹಿಸಿ, ಅಧ್ಯಯನ ಮಾಡಿ ಮಾನವ-ಆನೆ ಸಂಘರ್ಷಕ್ಕೆ ಶಾಶ್ವತ ಪರಿಹಾರ ಹುಡುಕಲು ಸೂಚಿಸುವುದಾಗಿ ಅವರು ಹೇಳಿದ್ದಾರೆ.

# ಪಾಲಿಕೆಗೆ ಅರೇಕಲ್ಲು ಹೊಸಳ್ಳಿ ಸೇರ್ಪಡೆ ಬೇಡ

## ಸದನದಲ್ಲಿ ಶಾಸಕ ಸ್ವರೂಪ್ ಪ್ರಸ್ತಾಪ | 110 ಕೋಟಿ ರೂ. ಅನುದಾನ ಭರವಸೆ

■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**





ಹಾಸನ: ನಗರಸಭೆಯಿಂದ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿಸುವ ಪ್ರಕ್ರಿಯೆಯಲ್ಲಿ ಕೆಲವು ಹಳ್ಳಿಗಳ ಅವೈಜ್ಞಾನಿಕ ಸೇರ್ಪಡೆ ಹಾಗೂ ಕೆಲ ಗ್ರಾಮಗಳ ಹೆಸರು ಬಿಟ್ಟಿರುವ ಕುರಿತು ಶಾಸಕ ಹೆಚ್.ಪಿ. ಸ್ವರೂಪ್ ಶುಕ್ರವಾರ ಸದನದಲ್ಲಿ ಗಮನ ಸೆಳೆದರು.

ವಿಧಾನಸಭೆ ಕಲಾಪದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಕೇಳಿದ ಅವರು, ನಗರ ಸುತ್ತಲಿನ 37 ಹಳ್ಳಿಗಳನ್ನು ಮಹಾನಗರ ಪಾಲಿಕೆಗೆ ಸೇರಿಸಲಾಗಿದೆ. ಅದರಲ್ಲಿ ಅರೇಕಲ್ಲು ಹೊಸಳ್ಳಿ ಗ್ರಾಮ ಸೇರಿಸಿದ್ದು ಅವೈಜ್ಞಾನಿಕ ನಿರ್ಧಾರ. ನಗರದಿಂದ ದೂರದಲ್ಲಿರುವ ಈ ಗ್ರಾಮವನ್ನು ಕೈಬಿಟ್ಟು ಹತ್ತಿರವಿರುವ ಬಿ. ಕಾಟಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿಡುಡಿ, ಚಿಟ್ಟನಹಳ್ಳಿ ಮತ್ತು ಲಕ್ಷ್ಮೀಸಾಗರ ಹಳ್ಳಿಗಳನ್ನು ಸೇರಿಸಬೇಕು ಎಂದು ಮನವಿ ಸಲ್ಲಿಸಿದರು.




ಅದಕ್ಕೆ ಪೌರಾಡಳಿತ ಸಚಿವ ರಹೀಂ ಖಾನ್ ಹಾಗು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಪ್ರತಿಕ್ರಿಯಿಸಿ, ಅರೇಕಲ್ಲು ಹೊಸಳ್ಳಿ ಗ್ರಾಮ ನಗರದಿಂದ ದೂರವಿರುವ ವಿಚಾರ ಗಮನಕ್ಕೆ ಬಂದಿದೆ. ಜಿಲ್ಲಾಧಿಕಾರಿಯಿಂದ ಅಗತ್ಯ ಮಾಹಿತಿ ತರಿಸಿಕೊಂಡು ಆ ಗ್ರಾಮವನ್ನು ಕೈಬಿಟ್ಟು ನಿಡುಡಿ, ಚಿಟ್ಟನಹಳ್ಳಿ ಮತ್ತು ಲಕ್ಷ್ಮೀಸಾಗರ ಗ್ರಾಮಗಳ ಮಾಹಿತಿ ಪಡೆದು ಸೇರ್ಪಡೆ ಮಾಡಲಾಗುವುದೆಂದು ಹೇಳಿದರು.


ನಗರಸಭೆಗೆ ಸುತ್ತಲಿನ ಗ್ರಾಮಗಳ ಸೇರ್ಪಡೆ ಮಾಡುವ ಸಂಬಂಧ 2018ರ ಅ. 10 ರಂದು ನಡೆದಿದ್ದ ಸಾಮಾನ್ಯ ಸಭೆಯಲ್ಲಿ ನಿಡುಡಿ, ಚಿಟ್ಟನಹಳ್ಳಿ ಹಾಗು ಲಕ್ಷ್ಮೀಸಾಗರ ಗ್ರಾಮಗಳನ್ನು ಕೈಬಿಡಲಾಗಿತ್ತು. ನಗರಸಭೆ ಕೌನ್ಸಿಲ್ ತೀರ್ಮಾನವಿಲ್ಲದೆ ಹೊಸ ಗ್ರಾಮಗಳನ್ನು ಸೇರಿಸಲು ಸಾಧ್ಯವಿಲ್ಲ. ನಗರಸಭೆ ಕೌನ್ಸಿಲ್ ಸಭೆಯ ನಂತರ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಒಪ್ಪಿಗೆ ಪತ್ರ ಪಡೆದು ಸೇರಿಸುವ ಕ್ರಮ ಕೈಗೊಳ್ಳಲಾಗಿತ್ತು. ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿರುವ ಅರೇಕಲ್ಲು ಹೊಸಹಳ್ಳಿ ಗ್ರಾಮವು ಹಂದಿನಕೆರೆ ದಾಖಲೆ ಗ್ರಾಮವಾಗಿದೆ. ಈ ಗ್ರಾಮವು ನಗರಸಭೆಯಿಂದ ದೂರದಲ್ಲಿದ್ದು ಅದರ ಬದಲಿಗೆ ಮೂರು ಗ್ರಾಮಗಳನ್ನು ಪರಿಗಣಿಸಬೇಕೆಂದು ಶಾಸಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ.

ಸಚಿವ ಸಂಪುಟ ಅನುಮೋದನೆ ಹಾಗು ಬಜೆಟ್‌ನಲ್ಲಿ ಹಾಸನ ನಗರಸಭೆಯನ್ನು ಮಹಾನಗರ ಪಾಲಿಕೆಯಾಗಿ ಘೋಷಿಸಿರುವ ಸರ್ಕಾರ ಮುಂದುವರೆದು ಹೊಸದಾಗಿ ಸೇರ್ಪಡೆಯಾಗಿರುವ 37 ಗ್ರಾಮಗಳ ಅಭಿವೃದ್ಧಿಗೆ 110 ಕೋಟಿ ರೂ. ಅನುದಾನ ಘೋಷಿಸಿರುವುದರಿಂದ ನಿರೀಕ್ಷೆಗಳು ಗರಿಗೆದರಿವೆ.

# ಅನಾಥ ಮಕ್ಕಳಿಗೆ ಸಹಾನುಭೂತಿ

■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಬಾಲ್ಯದಲ್ಲೇ ಹೆತ್ತ ತಂದೆ ತಾಯಿಯನ್ನು ಕಳೆದುಕೊಂಡು ಸರ್ಕಾರದ ಯಾವ ಸವಲತ್ತುಗಳಿಲ್ಲದೆ ಸಂಕಷ್ಟದ ಜೀವನ ನಡೆಸುತ್ತಿರುವ ಇಬ್ಬರು ಮಕ್ಕಳಿಗೆ ತಹಶೀಲ್ದಾರ್ ಎಂ. ಮಮತಾ ಸಹಾನುಭೂತಿ ತೋರುವ ಮೂಲಕ ಮಾನವೀಯತೆ ಮೆರೆದಿದ್ದಾರೆ.



ಆರು ವರ್ಷಗಳ ಹಿಂದೆ ಅನಾರೋಗ್ಯದಿಂದ ತಂದೆ ತಾಯಿ ನಿಧನದಿಂದ ಅರೇಹಳ್ಳಿ ಹೋಬಳಿ ಕಡೇಗರ್ಜೆ ಗಾಮದ ವೈಶಾಂತ್ (13) ಹಾಗು ವಿನಂತ್ (14) ಮಾವನ ಮನೆಯಲ್ಲಿ ವಾಸವಿದ್ದಾರೆ. ಸೂಕ್ತ ದಾಖಲಾತಿಗಳಿಲ್ಲದೆ ಮೂಲ ದಾಖಲೆಗಳಲ್ಲಿ ಒಂದಾಗಿರುವ ಆಧಾರ್ ಕಾರ್ಡ್ ಸಹ ಹೊಂದಲು ಸಾಧ್ಯವಾಗಿರಲಿಲ್ಲ.

ಹಿರಿಯ ಮಗ ವಿನಂತ್ ಅಂಗವಿಕಲನಾಗಿದ್ದರೂ ಸರ್ಕಾರದ ಯಾವ ಸವಲತ್ತು ತಲುಪುತ್ತಿಲ್ಲ. ಅದಕ್ಕಾಗಿ ಅವರು ಎಲ್ಲಾ ಸರ್ಕಾರಿ ಕಚೇರಿಗಳಿಗೆ ಅಲೆದಾಡಿದರೂ ಪ್ರಯೋಜನವಾಗಿರಲಿಲ್ಲ. ಅದೇ ಗ್ರಾಮದ ವಿಜಯ ರಾಜು ಅವರು ತಹಶೀಲ್ದಾರ್ ಎಂ. ಮಮತಾ ಅವರನ್ನು ಭೇಟಿಯಾಗಿ ಪರಿಸ್ಥಿತಿ ಮನವರಿಕೆ ಮಾಡಿಕೊಟ್ಟಿದ್ದರು. ವಿಷಯ ತಿಳಿದ ತಕ್ಷಣವೇ ಕಡೇಗರ್ಜೆ ಗ್ರಾಮಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಅವರು, ಇಬ್ಬರು ಮಕ್ಕಳನ್ನು ಹತ್ತಿರದ ಆಧಾರ್ ಸೇವಾ ಸೆಂಟರ್‌ಗೆ ಕರೆದುಕೊಂಡು ಹೋಗಿ ನೋಂದಣಿ ಮಾಡಿಸಿದ್ದಾರೆ. ಜೊತೆಗೆ ಅಂಗವಿಕಲತೆಯಿಂದ ಬಳಲುತ್ತಿರುವ ವಿನಂತ್‌ಗೆ ಮಾಸಾಶನಕ್ಕೆ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ್ದಾರೆ.

# ಮಾರಣಾಂತಿಕ ಹಲ್ಲೆ

ಆಲೂರು: ತಾಲ್ಲೂಕಿನ ದೇವರಾಯ ಪಟ್ಟಣ ಗ್ರಾಮದಲ್ಲಿ ಮನೆ ಮಾಲೀಕ ಬಾಡಿಗೆದಾರ ವ್ಯಕ್ತಿ ಹಾಗೂ ಆತನ ಅಳಿಯನ ಮೇಲೆ ರಿಪೀಸ್ ಪಟ್ಟಿಯಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ನಡೆದಿದೆ.

ಕಡದರವಳ್ಳಿ ಗ್ರಾಮದ ಶಮಿತ್ ಹಾಗೂ ಮಾವ ರೂಪನಂದನ್ ಮೇಲೆ ಮನೆ ಮಾಲೀಕ ಶ್ರೀನಿವಾಸ ಹಾಗೂ ಯಶವಂತ ಮನಬಂದಂತೆ ಹಲ್ಲೆ ನಡೆಸಿದ್ದಾರೆ. ಕಾಲೇಜು ಮುಗಿಸಿಕೊಂಡು ಶಮಿತ್ ಊಟಕ್ಕೆಂದು ಮಾವ ವಾಸವಿದ್ದ ಮನೆಗೆ ಹೋದಾಗ ಶ್ರೀನಿವಾಸ ಕ್ಷುಲ್ಲಕ ಕಾರಣಕ್ಕೆ ಜಗಳ ತೆಗೆದು ಹಲ್ಲೆ ನಡೆಸುತ್ತಿದ್ದರು. ಜಗಳ ಬಿಡಿಸಲು ಬಂದ ಶಮಿತ್‌ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ರಿಪೀಸ್ ಪಟ್ಟಿಯಿಂದ ತಲೆಗೆ ಹೊಡೆದಿದ್ದಾರೆ. ಶ್ರೀನಿವಾಸನ ಸಂಬಂಧಿಕರಾದ ಶೃತಿ, ಚೈತ್ರ, ಆರ್. ಹರ್ಷಿಕಾ ಕೆ.ಎಂ. ಧರ್ಮಪ್ಪ ಎಂಬುವವರು ಹಲ್ಲೆ ನಡೆಸಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಿಶ್ವ ಗ್ರಾಹಕರ ದಿನ ಇಂದು

■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾ. 15ರ ಶನಿವಾರ ಬೆಳಿಗ್ಗೆ 11 ಗಂಟೆಗೆ ವಿಶ್ವ ಗ್ರಾಹಕರ ದಿನಾಚರಣೆ ಏರ್ಪಡಿಸಲಾಗಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಮಾಹಿತಿ ಕೇಂದ್ರ ಹಾಗೂ ಕಾಲೇಜಿನ ವಾಣಿಜ್ಯ ಶಾಸ್ತ್ರ ವಿಭಾಗದಿಂದ ಸಮಾರಂಭ ಜರುಗಲಿದೆ.

ಜಿಲ್ಲಾಧಿಕಾರಿ ಸಿ. ಸತ್ಯಭಾಮ ಉದ್ಘಾಟನೆ ಮಾಡುವರು. ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಸಿ.ಎಂ. ಚಂಚಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ. ದಾಕ್ಷಾಯಿಣಿ ಭಾಗವಹಿಸುವರು. ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯೆ ಆರ್. ಅನುಪಮ, ಪ್ರಾಂಶುಪಾಲರಾದ ಡಾ. ಕೆ.ಜಿ. ಕವಿತ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಟಿ. ಪ್ರಸನ್ನ ಭಾಗವಹಿಸುವರು, ಜಿಲ್ಲಾ ಮಾಹಿತಿ ಕೇಂದ್ರ ಕಾರ್ಯಧ್ಯಕ್ಷ ವೈ.ಎಸ್. ಸಿದ್ದಯ್ಯ ಹಾಗೂ ವಕೀಲ ಎಸ್.ಆರ್ ಮನು ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಎಪಿಎಂಸಿಗೆ ಮೂಲಸೌಲಭ್ಯ ಕಲ್ಪಿಸಲು ಬದ್ಧ ಎಂದ ಸಂಸದ

■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ಮೂಲ ಸೌಕರ್ಯಗಳ ಕೊರತೆ ಹೆಚ್ಚಿದ್ದು ಹಂತ ಹಂತವಾಗಿ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಸಂಸದ ಶ್ರೇಯಸ್ ಪಟೇಲ್ ಭರವಸೆ ನೀಡಿದರು.



ಶುಕ್ರವಾರ ಬಳಿಗ್ಗೆ ಸಂತೆಪೇಟೆಯ ಎಪಿಎಂಸಿಗೆ ಭೇಟಿ ನೀಡಿದ್ದ ಅವರು, ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ಇಲ್ಲಿ ಸಮಸ್ಯೆಗಳಿರುವುದು ನಿಜ. ಇಡೀ ಜಿಲ್ಲೆಯಿಂದ ಮುಖ್ಯ ವ್ಯಾಪಾರ ಸ್ಥಳವಾಗಿರುವ ಇಲ್ಲಿಗೆ ಅನೇಕರು ಬರುತ್ತಾರೆ. ಜಾಗ ಕಿರಿದಾಗಿದೆ. ಮಳಿಗೆಗಳ ಸಮಸ್ಯೆಯೂ ಇದೆ ಎಂದರು.

ಎಲ್ಲವುಗಳ ಬಗ್ಗೆ ಪರಿಶೀಲಿಸಲಾಗಿದ್ದು, ಮುಂದೆ ಏನು ಕ್ರಮ ತೆಗೆದುಕೊಳ್ಳಬಹುದು ಎಂಬುದನ್ನು ಚರ್ಚಿಸಲಾಗಿದೆ. ಮುಂದೆ ಹಂತ ಹಂತವಾಗಿ ಸಮಸ್ಯೆ ಬಗೆಹರಿಸುವ ಕೆಲಸ ಮಾಡಲಾಗುವುದು. ಇಲ್ಲಿ ಸ್ವಚ್ಛತೆ ಬಗ್ಗೆ ನನಗಂತೂ ತೃಪ್ತಿ ಇಲ್ಲ ಎಂದರು.

ಮುಂದೆ ಸ್ವಚ್ಛತೆಗೆ ಒತ್ತು ಕೊಡುವಂತೆ ಹೇಳಲಾಗಿದೆ. ಇನ್ನೊಂದು ತಿಂಗಳಲ್ಲಿ ಮತ್ತೆ ಭೇಟಿ ನೀಡಲಾಗುವುದು. ಇದೇ ರೀತಿಯ ಲೋಪ-ದೋಷ ಮುಂದುವರೆದರೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಹೆಚ್ಚುವರಿ ಮಳಿಗೆಗಳಿಗೆ ಜಾಗದ ಸಮಸ್ಯೆಯಿದೆ. ಎಪಿಎಂಸಿ ಅಭಿವೃದ್ಧಿಗೆ ಏನೇನು ಮಾಡಬಹುದು ಎಂಬುದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಸದರಿ ಎಪಿಎಂಸಿಗೆ ಜಿಲ್ಲೆಯಾದ್ಯಂತ ಗ್ರಾಮೀಣ ಪ್ರದೇಶದಿಂದ ರೈತರು ತಮ್ಮ ಉತ್ಪನ್ನ ಮಾರಾಟ ಮಾಡಲು ಆಗಮಿಸುತ್ತಾರೆ. ಆದ್ದರಿಂದ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಭದ್ರತೆ ಜೊತೆಗೆ ಸುರಕ್ಷತಾ ಕ್ರಮಗಳನ್ನೂ ಅನುಸರಿಸುವ ಬಗ್ಗೆ ಸೂಚನೆ ನೀಡಲಾಗಿದೆ ಎಂದರು.

ಅಭಿವೃದ್ಧಿ ಕೆಲಸ ಯಾರೋ ಮಾಡುವುದು, ಮತ್ತೆ ಯಾರಿಗೋ ಹೆಸರು ಸಿಗಲಿದೆ ಎಂಬ ಪ್ರಶ್ನೆಗೆ ನನ್ನ ಕೆಲಸದ ಬಗ್ಗೆ ನನಗೆ ಆತ್ಮತೃಪ್ತಿ ಇದೆ. ನನಗೆ ಹೆಸರು ಬರುವುದಾಗಲಿ, ನಾನು ಕೆಲಸ ಮಾಡಿದೆ ಎನ್ನುವುದಾಗಲಿ ಮುಖ್ಯವಲ್ಲ. ಜಿಲ್ಲೆಯಲ್ಲಿ ನನಗೆ ಮತ ಕೊಟ್ಟಿರುವವರು, ನನ್ನ ಕ್ಷೇತ್ರ ಉದ್ಧಾರವಾಗಬೇಕೇ ಹೊರತು ಯಾವುದೇ ಹೆಸರಿಗಾಗಿ ಮಾಡುವುದಿಲ್ಲ. ಆತ್ಮತೃಪ್ತಿಗಾಗಿ ಅಭಿವೃದ್ಧಿ ಕೆಲಸ ಮಾಡಲಾಗುವುದು. ನಾನು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವುದು ಆತ್ಮತೃಪ್ತಿಯಿದೆ. ಕ್ರೆಡಿಟ್ ಹಿಂದೆ ನಾನು ಹೋಗದೇ ಕೆಲಸದ ಹಿಂದೆ ಹೋಗುತ್ತೇನೆ ಎಂದು ಉತ್ತರಿಸಿದರು.

ಇದೇ ವೇಳೆ ಕೂಲಿ ಕಾರ್ಮಿಕರು, ಹಮಾಲಿಗಳು ವಸತಿ ಕೊಡುವಂತೆ ಸಂಸದರ ಮುಂದೆ ಬೇಡಿಕೆ ಇಟ್ಟರು. ಇದಕ್ಕೆ ಹಾಸನ ಸುತ್ತಮುತ್ತ ಎಲ್ಲಾದರೂ 2 ಎಕರೆ ಭೂಮಿ ನೋಡಿ ಅಲ್ಲಿ ಅಪಾರ್ಟ್‌ಮೆಂಟ್ ರೀತಿ ಕಟ್ಟಿಸಿ ಮನೆ ನೀಡೋಣ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಎಪಿಎಂಸಿ ಒಳಗೆ ಕೆಲ ವರ್ತಕರು ಅಂಗಡಿ ಪಡೆದು ಬಾಡಿಗೆ ಕೊಡುತ್ತಿರುವ ಬಗ್ಗೆ ವರ್ತಕರು ಗಮನ ಸೆಳೆದಾಗ, ಅಂಥವರು ಯಾರಿದ್ದಾರೆ ಗುರುತಿಸಿದರೆ ರದ್ದು ಮಾಡಲು ತಹಸೀಲ್ದಾರ್‌ಗೆ ಸೂಚಿಸುವೆ ಎಂದರು. ಇದಕ್ಕೂ ಮುನ್ನ ಶ್ರೀ ಗಣಪತಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ನಂತರ ಪಾದಯಾತ್ರೆ ಮೂಲಕ ಮಾರುಕಟ್ಟೆ ಸುತ್ತಿದರು. ಈ ವೇಳೆ ಅನೇಕ ವರ್ತಕರು ಇಲ್ಲಿನ ಸಮಸ್ಯೆಗಳು ಹಾಗೂ ಆಗಬೇಕಾಗಿರುವ ಅಭಿವೃದ್ಧಿ ಕೆಲಸದ ಬಗ್ಗೆ ಸಂಸದರ ಗಮನಕ್ಕೆ ತಂದರು. ಕೆಲ ವರ್ತಕರು ತಾವು ಮಳಿಗೆ ಪಡೆದು ಬೇರೆಯವರಿಗೆ ಬಾಡಿಗೆ ನೀಡುತ್ತಿದ್ದಾರೆ. ಅರ್ಹರಿಗೆ ಮಳಿಗೆ ಸಿಗುತ್ತಿಲ್ಲ ಎಂದು ದೂರಿದರು.

# 15 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಭೂಮಿಪೂಜೆ

■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: 2024-25ನೇ ಸಾಲಿನಲ್ಲಿ ವಾಡಿಕೆಗಿಂತ ಹೆಚ್ಚು ಸುರಿದ ಮಳೆಯಿಂದಾಗಿ ಹಾನಿಗೀಡಾದ ರಸ್ತೆ, ಸೇತುವೆ ಹಾಗೂ ಚರಂಡಿ ಕಾಮಗಾರಿಗೆ 15 ಕೋಟಿ ರೂ. ನಿಗದಿಪಡಿಸಲಾಗಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.



ಪಟ್ಟಣದ ಮಿನಿ ವಿಧಾನಸೌಧದ ಮುಂಭಾಗ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅನುದಾನದಲ್ಲಿ ಗುರುಭವನದಿಂದ ಹೇಮಾವತಿ ಚಾನೆಲ್ ವರೆಗೆ 2.5 ಕಿ.ಮೀಟರ್ ರಸ್ತೆಯನ್ನು 10 ಕೋಟಿ ರೂ ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಶ್ರವಣಬೆಳಗೊಳ ಮಹಾಮಸ್ತಭಿಷೇಕ ಸಮಯದಲ್ಲಿ ಈ ರಸ್ತೆಯನ್ನು ಅಭಿವೃದ್ಧಿಪಡಿಸಿದ್ದು ಎಂಟು ವರ್ಷಗಳಾಗಿರುವುದರಿಂದ ರಸ್ತೆ ಬಿರುಕು ಬಿಟ್ಟಿದೆ. ರಸ್ತೆ ಸಂಪೂರ್ಣ ಹಾಳಾಗುವ ಮೊದಲೇ ಅಭಿವೃದ್ಧಿಪಡಿಸಿದರೆ ಮರು ನಿರ್ಮಾಣ ಮಾಡುವ ಅವಶ್ಯಕತೆ ಇರುವುದಿಲ್ಲ. ಈ ಕಾಮಗಾರಿಯಲ್ಲೇ ನಗರ ವ್ಯಾಪ್ತಿಯಲ್ಲಿ ಮುಖ್ಯ ರಸ್ತೆಗೆ ಸಂಪರ್ಕಿಸುವ ರಸ್ತೆಗಳನ್ನು ಸಹ ರಿಪೇರಿ ಮಾಡಲಾಗುವುದು ಎಂದರು.

40 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಬೆಂಗಳೂರು ಮುಖ್ಯ ರಸ್ತೆಯಿಂದ ಖಬರ್‌ಸ್ತಾನ್ ಮುಖಾಂತರ ಗದ್ದೆ ಬಿಂಡೇನಹಳ್ಳಿಗೆ ಸಂಪರ್ಕಿಸುವ ರಸ್ತೆಯನ್ನು ಪುರಸಭೆಯ ಅನುದಾನದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಪುರಸಭೆ ತೆರಿಗೆ ಸಂಗ್ರಹದ ಆಧಾರದ ಮೇಲೆ 5 ಕೋಟಿ ರೂ. ವೆಚ್ಚದ ಕಾಮಗಾರಿ ಪ್ರಗತಿಯಲ್ಲಿದೆ. ಆಸ್ಪತ್ರೆ ವೃತ್ತದಿಂದ ಮಾರೇನಹಳ್ಳಿವರೆಗೆ 10 ಕೋಟಿ ರೂ. ಅನುದಾನ ಮಂಜೂರಾಗಿದ್ದು ಶೀಘ್ರವೇ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ನಿಗದಿಯಾದ ಅನುದಾನಗಳನ್ನು ನಗರಾಭಿವೃದ್ಧಿಗೆ ಬಳಸಿಕೊಳ್ಳಲಾಗುವುದು. ಪ್ರಸಕ್ತ ಸಾಲಿನಲ್ಲಿ ಹೆಚ್ಚಿನ ಅನುದಾನಕ್ಕೆ ಬೇಡಿಕೆ ಸಲ್ಲಿಸಿದ್ದು ಹೆಚ್ಚಿನ ಅನುದಾನ ತಂದು ತಾಲ್ಲೂಕಿನ ಅಭಿವೃದ್ಧಿಗೆ ಶ್ರಮಿಸಲಾಗುವುದು. ಕಾಮಗಾರಿ ನಿಗದಿತ ಸಮಯಕ್ಕೆ ಮುಗಿಸಬೇಕು ಮತ್ತು ಗುಣಮಟ್ಟವನ್ನು ಕಾಪಾಡಬೇಕೆಂದು ಇಲಾಖಾಧಿಕಾರಿಗಳಿಗೆ ಸೂಚನೆ ನೀಡಿದರು.


ಪುರಸಭೆ ಅಧ್ಯಕ್ಷ ಸಿ.ಎನ್. ಮೋಹನ್, ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಆರ್. ಸುರೇಶ್, ಲೋಕೋಪಯೋಗಿ ಇಲಾಖೆ ಎಂಜಿನಿಯರ್ ರುಕ್ಮಿಣಿ, ಗುತ್ತಿಗೆದಾರ ಪಿ.ಆರ್. ತಿಮ್ಮೇಗೌಡ, ಮುಖಂಡರಾದ ಕೃಷ್ಣ, ಶಾಮಿಯಾನ ರಘು, ರಮೇಶ್ ಕುಂಬಾರಹಳ್ಳಿ, ಜನಿವಾರ ಗ್ರಾಮ ಪಂಚಾಯಿತಿ ಸದಸ್ಯ ಸತೀಶ್ ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

# ಮಕ್ಕಳ ಮಾನಸಿಕ ಆರೋಗ್ಯ ಮತ್ತು ಶಿಕ್ಷಣದಲ್ಲಿ ಪೋಷಕರ ಪಾತ್ರ

ಪ್ರಿಯ ಓದುಗರೆ ಇವತ್ತಿನ ಆಧುನಿಕ ಜಗತ್ತಿನಲ್ಲಿ ಜನರ ಜೀವನವು ತಾಂತ್ರಿಕವಾಗಿದೆ. ದಿನ ಬೆಳಗಾದರೆ ಎಲ್ಲಾ ತಾಂತ್ರಿಕವಾಗಿ ನಡೆಯುತ್ತಿ ರುವುದರಿಂದ ಮಾನವರಾದ ನಾವು ಕೆಲವು ಜೀವನದ ಮೌಲ್ಯಗಳನ್ನು ತಿಳಿದುಕೊಳ್ಳುವುದರಲ್ಲಿ ವಿಫಲವಾಗುವುದಲ್ಲದೆ ನಮ್ಮ ಮಕ್ಕಳನ್ನು ಸಹ ಪ್ರತಿಯೊಂದು ರಂಗದಲ್ಲೂ ತಾಂತ್ರಿಕವಾಗಿ ಮಾಡುತ್ತಾ ಜೀವನದ ಮೌಲ್ಯಗಳನ್ನು ತಿಳಿಪಡಿಸುವಲ್ಲಿ ವಿಫಲರಾಗುತ್ತಿದ್ದೇವೆ. ಮಕ್ಕಳ ಮಾನಸಿಕ ಆರೋಗ್ಯ ಕುರಿತು ಯೋಚಿಸದೆ, ಅವರ ಸುಂದರವಾದ ಬಾಲ್ಯವನ್ನು ಕಸಿದುಕೊಂಡು ಯಂತ್ರಗಳ ರೂಪದಲ್ಲಿ ಮುನ್ನಡೆಸುತ್ತಿದ್ದೇವೆಂದು ಹೇಳಿದರೆ ತಪ್ಪಾಗಲಾರದು. ಒಂದು ಮಗುವಿನ ಮಾನಸಿಕ ಹಾಗೂ ಶೈಕ್ಷಣಿಕ ಬೆಳವಣಿಗೆಯಲ್ಲಿ ಪೋಷಕರು, ಶಿಕ್ಷಕರು, ಮಗುವಿನ ಗ್ರಹಿಕಾ ಸಾಮರ್ಥ್ಯ ತುಂಬಾ ಮುಖ್ಯವಾಗಿ ತ್ರಿಕೋನಕಾರವಾಗಿ ಕಾರ್ಯನಿರ್ವಹಿಸುತ್ತದೆ.

ಮಗುವಿನ ಪ್ರತೀ ಹಂತದ ಬೆಳವಣಿಗೆಯಲ್ಲಿ ಪೋಷಕರು ಮಗುವಿನ ಮಾನಸಿಕ ಹಾಗೂ ಶೈಕ್ಷಣಿಕ ಬೆಳವಣಿಗೆಗೆ ಬೇಕಾಗುವ ಸಹಕಾರವನ್ನು ನೀಡಬೇಕಾಗುತ್ತದೆ. ಪ್ರತಿಯೊಂದು ಮಗುವಿನ ಮೆದುಳು ಅದರದೇ ಆದ ಸಾಮರ್ಥ್ಯ ಹೊಂದಿರುತ್ತದೆ. ಆದ್ದರಿಂದಲೇ ಪ್ರತಿಯೊಂದು ಮಗುವಿನ ಕಲಿಕಾ ವಿಧಾನ ಭಿನ್ನವಾಗಿರುತ್ತದೆ.

ಪೋಷಕರಾದ ನಾವು ಮೊದಲು ನಮ್ಮಮಗುವಿನ ಮೆದುಳಿನ ಗ್ರಹಿಕಾ ಶಕ್ತಿ ಎಷ್ಟಿದೆ. ಕಲಿಕಾ ವಿಧಾನ ಯಾವುದೆಂದು ತಿಳಿದುಕೊಳ್ಳಬೇಕು. ಕೆಲವು ಮಕ್ಕಳು ಆಟವಾಡುವ ಮುಖೇನ ಕಲಿತರೆ ಇನ್ನೂ ಕೆಲವು ಮಕ್ಕಳು ಬಣ್ಣಗಳು, ಚಿತ್ರಗಳ ಅಭಿನಯದ ಮೂಲಕ ಹೀಗೆ ಹಲವಾರು ವಿಧಾನಗಳಿಗೆ ಆಕರ್ಷಿತರಾಗಿ ಕಲಿಯುತ್ತಾರೆ. ಪೋಷಕರಾದ ನಾವು ಮಗುವಿಗೆ ಯಾವ ವಿಧಾನ ಸುಲಭ ಹಾಗೂ ಎಷ್ಟು ಬಾರಿ ಹೇಳಿದಾಗ ಗ್ರಹಿಕೆ ಮಾಡುತ್ತದೆಯೆಂದು ತಿಳಿದು ಕಲಿಸಬೇಕು. ಮಕ್ಕಳ ಏಳಿಗೆಗೆ ಮನೆಯೇ ಮೊದಲ ಪಾಠ ಶಾಲೆ ತಾಯಿಯೇ ಮೊದಲ ಗುರು ಎಂಬುದನ್ನು ಮರೆಯಬಾರದು.



ನಾವು ಎಷ್ಟೇ ಒತ್ತಡದಲ್ಲಿದ್ದರು ಮಕ್ಕಳಿಗಾಗಿ ಒಂದಷ್ಟು ಸಮಯವನ್ನು ಮೀಸಲಿಡಬೇಕು. ಮಗು ಶಾಲೆಯಿಂದ ಮನೆಗೆ ಬಂದಾಗ ಮಾತನಾಡಿ ಅಂದಿನ ಪಾಠಗಳು ಹಾಗೂ ಶಾಲೆಯಲ್ಲಿ ಏನಾಯಿತು ಎಂಬುದರ ಬಗ್ಗೆ ಪ್ರೀತಿಯಿಂದ ಸಮಾಧಾನವಾಗಿ ವಿಚಾರಿಸಬೇಕು. ಅದರಿಂದ ಮಗುವಿಗೆ ಸುರಕ್ಷತಾ ಭಾವನೆ ಬೆಳೆಯುತ್ತದೆ ಮತ್ತು ಮಾನಸಿಕವಾಗಿ ಸದೃಢವಾಗುತ್ತದೆ.

ಕೆಲವು ಪೋಷಕರು ನಾವು ಹಣ ಕಟ್ಟಿರುವುದು ಶಿಕ್ಷಕರು ನಮ್ಮ ಮಕ್ಕಳಿಗೆ ಎಲ್ಲಾ ರೀತಿಯ ಶೈಕ್ಷಣಿಕ ನೀಡಲೆಂದು ಎನ್ನುವ ಮನೋಭಾವವನ್ನು ಬಿಡಬೇಕೆಂದು ಈ ಮೂಲಕ ತಮ್ಮಲ್ಲಿ ನನ್ನ ಕಳಕಳಿಯ ಪ್ರಾರ್ಥನೆ. ಇನ್ನೂ ಸರ್ಕಾರಿ ಶಾಲಾ ಮಕ್ಕಳ ಪೋಷಕರು ಸರ್ಕಾರ ಸಂಬಳ ಕೊಡುವುದು ಪಾಠ ಮಾಡಲು ಮಾಡಲಿ ಬಿಡಿ ಎಂಬ ಮನೋಭಾವವನ್ನು ಬದಲಿಸಿಕೊಳ್ಳಿ ಏಕೆಂದರೆ ಶಿಕ್ಷಕರು ಶಾಲೆಯಲ್ಲಿ ಅವರಿಗೆ ಸೀಮಿತ ಸಮಯದಲ್ಲಿ ಎಲ್ಲ ಮಕ್ಕಳಿಗೂ ಯಾವ ಧೋರಣೆಯನ್ನೂ ಮಾಡದೆ ಜ್ಞಾನಧಾರೆಯನ್ನು ಎರೆದಿರುತ್ತಾರೆ. ಆದರೆ ಅವರಿಗೆ ಪ್ರತಿ ಮಗುವಿಗೂ ಇಂತಿಷ್ಟು ಸಮಯ ಕೊಟ್ಟು ಆ ಮಗುವಿನ ಮಾನಸಿಕ, ಶೈಕ್ಷಣಿಕ ಗ್ರಹಿಕಾ ಶಕ್ತಿಯನ್ನು ತಿಳಿದು ಪಾಠ ಮಾಡುವಷ್ಟು ಸಮಯವನ್ನು ಶಾಲಾವಧಿಯಲ್ಲಿ ಹೊಂದಿಸಲಾಗದು. ಆದ್ದರಿಂದ ಅಷ್ಟು ಸಮಯದಲ್ಲೇ ಅವರು ತಮ್ಮ ಕರ್ತವ್ಯ ಮಾಡಿರುತ್ತಾರೆ.

ಪೋಷಕರಾದ ನಮಗೆ ಮಗುವಿನ ಬಗ್ಗೆ ವಿಶೇಷ ಕಾಳಜಿ ವಹಿಸುವುದು ಆದ್ಯ ಕರ್ತವ್ಯ. ಮಕ್ಕಳ ದಿನಚರಿಯನ್ನು ಕ್ರಮಬದ್ಧವಾಗಿ ರೂಪಿಸಿ ತಕ್ಕ ಸಮಯದಲ್ಲಿ ಪಾಲಿಸಿದರೆ ಯಶಸ್ಸು ಶತಸಿದ್ಧ.

ಮಕ್ಕಳನ್ನು ನಾವು ಮಗುವಾಗಿದ್ದಾಗಲೇ ಹೇಗೇಬೇಕೋ ಹಾಗೆ ಸುಲಭ ರೀತಿಯಲ್ಲಿ ರೂಪಿಸಬಹುದು. ಆದರೆ ದೊಡ್ಡವರಾದ ಮೇಲೆ ಅದು ಅಸಾಧ್ಯ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇಎಂಬಂತೆ ಪೋಷಕರಾದ ನಾವು ಮಕ್ಕಳಿಗೆ ಸಹಕರಿಸದೆ ನಮ್ಮ ಮಹತ್ತರ ಬೇಡಿಕೆಗಳನ್ನು ಅಂದರೆ ವಯಸ್ಸಿಗೂ ಮೀರಿದ ಸಾಧನೆಗಳನ್ನು ಮಗುವಿನಿಂದ ಬಯಸುತ್ತಾ ಒತ್ತಡ ಹೇರುತ್ತಿರುತ್ತೇವೆ.

ಒಬ್ಬ ತಾಯಿಯಾಗಿ ನಿಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಮಕ್ಕಳಲ್ಲಿ ನಮ್ಮ ಮಹತ್ತರ ಬೇಡಿಕೆಗಳನ್ನಿಡುವ ಮೊದಲು ಅದು ಅವರಿಂದ ಸಾಧ್ಯವೇ ಎಂದು ಆಲೋಚಿಸಿ. ಮಕ್ಕಳನ್ನು ಸ್ನೇಹಿತರಂತೆ ಸ್ವತಂತ್ರವಾಗಿ ಬೆಳೆಸಿ ಆಯ್ಕೆಗಳನ್ನು ಮಗುವಿಗೆ ಕೊಡಿ ಖಂಡಿತ ಈಗಿನ ಮಕ್ಕಳು ನಮಗಿಂತ ತುಂಬಾ ಬುದ್ಧಿವಂತರು ಅವರು ಒಳ್ಳೆಯ ಆಯ್ಕೆಗಳನ್ನೇ ಮಾಡುತ್ತಾರೆ.

ದಿನ ನಿತ್ಯ ನಮ್ಮ ಸುತ್ತ ಮುತ್ತ ನಡೆಯುವುದನ್ನು ಮುದ್ದು ಮಾತುಗಳಿಂದ ಉದಾಹರಣೆ ಕೊಟ್ಟು ಹೇಳಿ ಮಗು ಸರಿಯಾದುದನ್ನೇ ಆಯ್ಕೆಮಾಡಿಕೊಳ್ಳುತ್ತದೆ. ಪೋಷಕರು ಮಾಡುವ ಇನ್ನೊಂದು ತಪ್ಪು ಏನೆಂದರೆ ಬೇರೆ ಮಗುವಿನೊಂದಿಗೆ ಹೋಲಿಕೆ ಮಾಡುವುದು, ಮಗುವಿನ ಶೈಕ್ಷಣಿಕ ಪ್ರಗತಿ ಕುಂಠಿತವಾದಾಗ ಕಾರಣಗಳ ಅನ್ವೇಷಣೆ ಬದಲು ಉತ್ತಮ ಸಾಧನೆ ಮಾಡಿದ ಬೇರೆ ಮಗುವಿನೊಂದಿಗೆ ಹೋಲಿಕೆ ಮಾಡಿ ನಿಂದಿಸುವುದನ್ನು ದಯವಿಟ್ಟು ನಿಲ್ಲಿಸಿ.

ಮಕ್ಕಳು ಚಿಕ್ಕ ಪುಟ್ಟ ತಪ್ಪುಗಳನ್ನು ಮಾಡಿದಾಗ ಶಿಕ್ಷಿಸುವ ಬದಲು ಪ್ರೀತಿಯಿಂದಲೇ ತಿಳಿಹೇಳಿ ನಮ್ಮ ಬಂಧನದಿಂದ ನುಸುಳಿ ಹೋಗದಂತೆ ನೋಡಿಕೊಳ್ಳಬೇಕು. ಮಗುವಿನ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸುತ್ತಾ ಮಗುವಿನ ಚಲನವಲನಗಳ ಬಗ್ಗೆ ಅವರಿಗೂ ತಿಳಿಸಿ, ಅವರಿಂದ ನಾವೂ ತಿಳಿದು ಮಕ್ಕಳ ಶೈಕ್ಷಣಿಕ ಹಾಗೂ ಮಾನಸಿಕ ಪ್ರಗತಿಯಲ್ಲಿ ಪಾಲುದಾರರಾಗೋಣ. ಮಗುವಿನ ನೆಚ್ಚಿನ ಗುರುಗಳನ್ನು ಮಾದರಿಯಾಗಿ ತೆಗೆದುಕೊಂಡು ಮಕ್ಕಳನ್ನು ಪ್ರೋತ್ಸಾಹಿಸಿ ಕಳಿಕೋತ್ಸಾಹ ತುಂಬಿ ಮಾನಸಿಕವಾಗಿ ಸದೃಢಗೊಳಿಸಿ ಶಾಲರಂಗಕ್ಕೆ ತಲುಪಿಸಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ.

ಹೀಗೆ ಶಿಕ್ಷಕರು ಪೋಷಕರೂ ಮತ್ತು ಮಕ್ಕಳು ತ್ರಿಕೋನ ಬಂಧನದಲ್ಲಿ ಕಾರ್ಯನಿರ್ವಹಿಸಿ ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸಬೇಕಾಗುತ್ತದೆ. ಪೋಷಕರೇ ಕಟ್ಟ ಕಡೆಯದಾಗಿ ನೆನಪಿಟ್ಟುಕೊಳ್ಳಿ ನಮ್ಮ ಮಕ್ಕಳು ಪ್ರತೀ ಹೆಜ್ಜೆಯಲ್ಲೂ ನಮ್ಮನ್ನೇ ಪ್ರತಿನಿಧಿಸುತ್ತಾರೆ ಮರೆಯದಿರಿ.



-ಎನ್. ಶಿಲ್ಪಾ,
ಕಾರ್ಯದರ್ಶಿ
ಕೇಂದ್ರ ಕನ್ನಡ ಸಾಹಿತ್ಯ
ವೇದಿಕೆ ತಿಪಟೂರು

# ಗುರುವಿನ ಮಾರ್ಗದರ್ಶನ ಅಗತ್ಯ: ಸಿದ್ದಲಿಂಗ ಸ್ವಾಮೀಜಿ

■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ವೀರಶೈವ- ಲಿಂಗಾಯತ ಸಮುದಾಯದಲ್ಲಿ ಗುರುವಿಗೆ ಮಹತ್ವದ ಸ್ಥಾನವಿದೆ ಎಂದು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಹೇಳಿದರು.

ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ವೀರಶೈವ-ಲಿಂಗಾಯತ ಯುವ ಸೇನೆ ಆಯೋಜಿಸಿದ್ದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಆರನೇ ಪುಣ್ಯ ಸ್ಮರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.



ಬದುಕು ಪಾವನಗೊಳ್ಳಬೇಕಾದರೆ ಗುರುವಿನ ಮಾರ್ಗದರ್ಶನ ಅಗತ್ಯ. ಶ್ರೀ ಶಿವಕುಮಾರ ಸ್ವಾಮೀಜಿಗಳ ಜೀವನ ಸಮಾಜಕ್ಕಾಗಿ ಅರ್ಪಿತವಾಗಿತ್ತು. ಅವರು ಬದುಕಿದ್ದಷ್ಟೇ ಅಲ್ಲ, ಅವರ ತತ್ವವೂ ಚಿರಂಜೀವಿಯಾಗಿದೆ. ರಾಜ್ಯದಲ್ಲಿ ಅನಕ್ಷರತೆ ಹಾಗೂ ಬಡತನ ತಾಂಡವವಾಡುತ್ತಿದ್ದ ಸಂದರ್ಭದಲ್ಲಿ ಅನ್ನ-ಅಕ್ಷರ ದಾಸೋಹ ಆರಂಭಿಸಿದ ಶ್ರೀಗಳ ಸೇವೆ ಅನನ್ಯ. ಗ್ರಾಮೀಣ ಭಾಗದ ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಶಾಲೆಗಳು ಸ್ಥಾಪಿಸಲ್ಪಟ್ಟವು. ಸಿದ್ಧಗಂಗಾ ಮಠ ಸಂಸ್ಕಾರಯುತ ಶಿಕ್ಷಣ ನೀಡುವ ಗುರಿಯೊಂದಿಗೆ ಕಾರ್ಯ ನಿರ್ವಹಿಸುತ್ತಿದೆ ಎಂದು ಅವರು ತಿಳಿಸಿದರು.

ತಾಲೂಕಿನಲ್ಲಿ ವನ್ಯಜೀವಿ ಮತ್ತು ಮಾನವ ಸಂಘರ್ಷ ತೀವ್ರವಾಗಿರುವುದನ್ನು ಅವರು ಉಲ್ಲೇಖಿಸಿ, ಕಾಡುಪ್ರಾಣಿಗಳು ನಾಡಿಗೆ ಸೇರುವ ಪ್ರಮಾಣ ಹೆಚ್ಚಾಗಿದೆ. ಮಠದಲ್ಲೂ ಚಿರತೆ ಕಾಟ ಆರಂಭವಾಗಿದೆ. ಸಮಸ್ಯೆ ನೀಡುವ ವನ್ಯಜೀವಿಗಳನ್ನು ಹಿಡಿದು ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸುವಂತೆ ಸರ್ಕಾರದ ಗಮನ ಸೆಳೆಯಲಾಗಿದೆ. ಮಾನವ ಪ್ರಾಣ ಹಾನಿ ತಪ್ಪಿಸಲು ಮುನ್ನೆಚ್ಚರಿಕೆ ಅಗತ್ಯ ಎಂದರು.

ಯುವಕರ ಬಗ್ಗೆ ಮಾತನಾಡುತ್ತ, ದೇಶದ ಸಂಪತ್ತು ಯುವಕರು. ಅವರ ಶಕ್ತಿ ಸದೃಢ ಸಮಾಜ ನಿರ್ಮಾಣಕ್ಕೆ ವಿನಿಯೋಗವಾಗಬೇಕು.

ಉದ್ಯೋಗಕ್ಕಾಗಿ ನಗರಗಳಿಗೆ ತೆರಳುವವರು ತಮ್ಮ ಹುಟ್ಟೂರನ್ನು ಮರೆಯಬಾರದು. ಕಾಫಿ ಬೆಳೆಗಾರರ ಸಮಸ್ಯೆಗಳಿಗೂ ನನಗೆ ಅರಿವಿದೆ. ಬೆಲೆ ಇದ್ದಾಗ ಬೆಳೆ ಇಲ್ಲದಿರುವುದು, ಬೆಳೆ ಇದ್ದಾಗ ಬೆಲೆ ಇಲ್ಲದಿರುವುದು ಪ್ರಕೃತಿ ನಿಯಮ. ಇಂತಹ ಸವಾಲುಗಳ ನಡುವೆ ಬದುಕಲು ಕಲಿಯಬೇಕು ಎಂದರು.

ತೆಂಕಲಗೋಡು ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ಸರ್ಕಾರ ಶಿಕ್ಷಣ ನೀಡಬೇಕು ಎಂಬ ವಿಚಾರ ಮೊದಲು ಬರಬೇಕಾದರೆ, ಮಠಗಳು ಈ ಮೊದಲು ಸಂಸ್ಕಾರಯುತ ಶಿಕ್ಷಣವನ್ನು ನೀಡುತ್ತಾ ಬಂದಿವೆ. ಈ ಕಾರಣಕ್ಕೆ ರಾಜ್ಯದಲ್ಲಿ ಅನೇಕರು ವಿದ್ಯಾವಂತರಾಗಲು ಸಾಧ್ಯವಾಯಿತು. ಸಿದ್ದಗಂಗಾ ಮಠ ಜಾತಿ-ಮತ ಭೇದವಿಲ್ಲದೆ ಶಿಕ್ಷಣ ನೀಡುತ್ತಾ ಸಮಾಜ ಸೇವೆ ಮಾಡುತ್ತಿದೆ. ಸ್ವಂತ ಪ್ರಯೋಜನಕ್ಕಾಗಿ ಬದುಕುವವರ ನೆನಪು ನಶ್ವರ, ಆದರೆ ಸಮಾಜಕ್ಕಾಗಿ ಬದುಕುವವರು ಮಹಾತ್ಮರಾಗುತ್ತಾರೆ. ಮರಣದ ನಂತರವೂ ಜೀವಂತರಾಗಲು, ನಿಸ್ವಾರ್ಥ ಸಮಾಜ ಸೇವೆ ಮಾಡಬೇಕು ಎಂದರು.

ಕಿರಿಕೊಡ್ಲಿಮಠದ ಸದಾಶಿವ ಸ್ವಾಮೀಜಿ, ಕಲ್ಲುಮಠದ ಮಹಾಂತ ಸ್ವಾಮೀಜಿ, ತಣ್ಣೀರುಹಳ್ಳ ಮಠದ ವಿಜಯಕುಮಾರ್ ಸ್ವಾಮೀಜಿ ಇತರರಿದ್ದರು.

# ಜಿನ್ನೇನಹಳ್ಳಿ ಪಿಕೆಪಿಎಸ್‌ಗೆ ಅವಿರೋಧ ಆಯ್ಕೆ


■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಜಿನ್ನೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 5 ವರ್ಷಗಳ ಅವಧಿಗೆ 11 ಮಂದಿ ನಿರ್ದೇಶಕರು ಅವಿರೋಧ ಆಯ್ಕೆಯಾಗಿದ್ದಾರೆ.

ಹಿಂದಿನ ಆಡಳಿತ ಮಂಡಳಿಯ ಐದು ವರ್ಷಗಳ ಅವಧಿ ಪೂರ್ಣಗೊಂಡ ಹಿನ್ನೆಲೆ ಮುಂದಿನ 2025 ರಿಂದ 2030 ರ ವರೆಗಿನ 5 ವರ್ಷಗಳ ಅವಧಿಗೆ ಚುನಾವಣೆ ನಿಗದಿಯಾಗಿತ್ತು. ಸಂಘವು 11 ಮಂದಿ ನಿರ್ದೇಶಕರ ಬಲ ಹೊಂದಿದ್ದು ಜೆಡಿಎಸ್ ಬೆಂಬಲಿತ 11 ಸದಸ್ಯರು ಹೊರತು ಪಡಿಸಿದರೆ ಮತ್ಯಾರು ನಾಮಪತ್ರ ಸಲ್ಲಿಸದ ಕಾರಣ ಅವರನ್ನೇ ಅವಿರೋಧ ಆಯ್ಕೆ ಮಾಡಲಾಯಿತು.

ಚುನಾವಣಾ ಅಧಿಕಾರಿಯಾಗಿ ಸಹಕಾರ ಇಲಾಖೆಯ ಅಧಿಕಾರಿ ವಾಸಿಂ ಕರ್ತವ್ಯ ನಿರ್ವಹಿಸಿದರು. ಅವಿರೋಧವಾಗಿ ಆಯ್ಕೆಗೊಂಡ ನಿರ್ದೇಶಕರನ್ನು ಗಣ್ಯರು, ಅಭಿಮಾನಿಗಳು ಹಾಗೂ ಸಂಘದ ವತಿಯಿಂದ ಅಭಿನಂದಿಸಲಾಯಿತು.

ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಎಚ್.ಜಿ. ರಾಮಕೃಷ್ಣ, ಜಿನ್ನೇನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಜೆ.ಎಸ್. ಮಂಜುನಾಥ್, ಪ್ರಮುಖರಾದ ಜೆ.ಜೆ. ಧನಂಜಯ, ಜೆ.ಡಿ. ಮಂಜು ಹಾಗೂ ಅಧಿಕಾರಿಗಳು ಇದ್ದರು.



# ನರೇಗಾ: 220 ಕೋಟಿ ರೂ. ಖರ್ಚು

## ಮಾನವ ದಿನಗಳ ಸೃಷ್ಟಿ ಗುರಿ ತಲುಪುವಲ್ಲಿ ಹಿನ್ನಡೆ | 358 ಕೆರೆಗಳಿಗೆ ಮರುಜೀವ

■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ 2024-25ನೇ ಸಾಲಿನಲ್ಲಿ ಜಿಲ್ಲಾದ್ಯಂತ 220.51 ಕೋಟಿ ರೂ. ಖರ್ಚು ಮಾಡಲಾಗಿದೆ.

ಜಿಲ್ಲಾ ಪಂಚಾಯಿತಿ ಮೂಲಕ ಗ್ರಾ.ಪಂ. ಹಂತದಲ್ಲಿ ಕೆಲಸ ಕೈಗೊಳ್ಳಲಾಗುತ್ತದೆ. 2024-25ನೇ ಸಾಲಿನಲ್ಲಿ 242 ಶಾಲಾ ಆಟದ ಮೈದಾನ ನಿರ್ಮಾಣ, 12 ಶಾಲಾ ಅಡುಗೆ ಕೊಠಡಿ, 134 ಪ್ಲೇ ಗ್ರೌಂಡ್, 358 ಕೆರೆ ಹೂಳು ತೆಗೆದಿರುವುದು, 436 ಕಟ್ಟೆಗಳ ಅಭಿವೃದ್ಧಿ, 35 ಕಲ್ಯಾಣ ಸ್ವಚ್ಛತೆ, 5160 ಕ್ಯಾಟಲ್ ಶೆಡ್, ತೋಟಗಾರಿಕೆ ಹಾಗು ಕೃಷಿ ಇಲಾಖೆಯಲ್ಲಿ 10 ಸಾವಿರಕ್ಕೂ ಹೆಚ್ಚು ಕೆಲಸಗಳಾಗಿವೆ. ಸಾಮಾಜಿಕ ಅರಣ್ಯ ಇಲಾಖೆ ಹೀಗೆ ಹತ್ತು ಹಲವು ಕಾರ್ಯಗಳು ನರೇಗಾ ಯೋಜನೆಯಡಿ ಆಗಿದೆ.



ತಲುಪದ ಗುರಿ: ಗ್ರಾಮೀಣ ಪ್ರದೇಶಗಳಲ್ಲಿ ಸ್ವಯಂ ಪ್ರೇರಣೆಯಿಂದ ಕೆಲಸ ಮಾಡಲು ಇಚ್ಛಿಸುವವರಿಗೆ ವಾರ್ಷಿಕ 100 ದಿನಗಳ ಉದ್ಯೋಗ ಕಲ್ಪಿಸಬೇಕು ಎಂಬ ಉದ್ದೇಶದಿಂದ ಜಾರಿಗೆ ಬಂದಿರುವ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಗೆ 2025-26ನೇ ಸಾಲಿಗೆ ನೀಡುತ್ತಿದ್ದ ಗುರಿಯಲ್ಲಿ ಕಡಿತಗೊಳಿಸಲಾಗಿದೆ. ನರೇಗಾ ಯೋಜನೆಯಡಿ ವರ್ಷದಿಂದ ವರ್ಷಕ್ಕೆ ಮಾನವ ದಿನಗಳ ಸೃಜನೆ ಗುರಿ ಹೆಚ್ಚಬೇಕು. ಆದರೆ 2024-25ನೇ ಸಾಲಿನ ಗುರಿ ತಲುಪುವಲ್ಲಿ ವಿಳಂಬವಾಗಿದೆ. ಈ ಹಿನ್ನಲೆಯಲ್ಲಿ 2025-26ನೇ ಸಾಲಿನ ಕ್ರಿಯಾ ಯೋಜನೆ ರೂಪಿಸಿರುವ ಜಿಲ್ಲಾ ಪಂಚಾಯಿತಿ ಮಾನವ ದಿನಗಳ ಸೃಜನೆಯನ್ನು ಕಡಿಮೆ ಮಾಡಿದೆ. 2024-25ನೇ ಸಾಲಿನಲ್ಲಿ 44 ಲಕ್ಷ ಮಾನವ ದಿನಗಳ ಗುರಿ ಹೊಂದಲಾಗಿತ್ತು. ಆದರೆ ಆರ್ಥಿಕ ವರ್ಷದ ಅಂತ್ಯಕ್ಕೆ ಇನ್ನೇನು 18 ದಿನಗಳಷ್ಟೇ ಬಾಕಿಯಿದ್ದು 40.96 ಲಕ್ಷ ಮಾನವ ದಿನಗಳ ಸೃಷ್ಟಿಯಾಗಿದೆ. ಬಾಕಿ ದಿನಗಳಲ್ಲಿ ಅಂದಾಜು 1 ಲಕ್ಷ ಉದ್ಯೋಗ ಸೃಷ್ಟಿಸಬಹುದಷ್ಟೇ ಎಂಬ ಲೆಕ್ಕಾಚಾರದಲ್ಲಿರುವ ಅಧಿಕಾರಿಗಳು ಮುಂದಿನ ವರ್ಷದ ಗುರಿಗೆ ಕಡಿವಾಣ ಹಾಕಿದ್ದಾರೆ.

ಗ್ರಾಮೀಣ ಜನರಿಗೆ ವರದಾನ: ಗ್ರಾಮೀಣ ಭಾಗದಲ್ಲಿ ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ 2005ರಲ್ಲಿ ಆರಂಭವಾದ ನರೇಗಾ ಯೋಜನೆ ಲಕ್ಷಾಂತರ ಜನರಿಗೆ ಅನುಕೂಲ ಕಲ್ಪಿಸಿಕೊಟ್ಟಿದೆ. ಗ್ರಾಮ ಪಂಚಾಯಿತಿಯಿಂದ 5 ಕಿ.ಮೀ. ವ್ಯಾಪ್ತಿಯಲ್ಲಿ ಕೆಲಸ ನೀಡುವುದು ನರೇಗಾ ಉದ್ದೇಶ.

ಕೆರೆಗಳಿಗೆ ಜೀವದಾನ: ಜಿಲ್ಲೆಯ 267 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ಕೆರೆಗಳ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಹತ್ತಾರು ವರ್ಷಗಳಿಂದ ಅಂತರ್ಜಲ ಬತ್ತಿ ಸಂಪೂರ್ಣ ಅಸ್ತಿತ್ವ ಕಳೆದುಕೊಂಡಿದ್ದ ಕೆರೆಗಳಿಗೆ ಮರುಜೀವ ಬಂದಂತಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಕಾಮಗಾರಿ ಪರಿಶೀಲನೆಗೆ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳು ಕಳೆದ ಒಂದು ವಾರದಿಂದ ಪರಿಶೀಲನೆ ನಡೆಸುತ್ತಿದ್ದಾರೆ.

# ರೇಣುಕಾಚಾರ್ಯ ಮನುಕುಲದ ಉದ್ಧಾರಕ

■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಜಗದ್ಗುರು ರೇಣುಕಾಚಾರ್ಯರು ವೀರಶೈವ ಧರ್ಮದ ಮಹಾನ್ ಶರಣ ಮತ್ತು ಗುರುಗಳಲ್ಲಿ ಒಬ್ಬರು ಎಂದು ತಹಸೀಲ್ದಾರ್ ಕೆ.ಆರ್. ಪೂರ್ಣಿಮ ಅಭಿಪ್ರಾಯಪಟ್ಟರು.

ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದ್ದ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ರೇಣುಕಾಚಾರ್ಯರರ ತತ್ವ, ಬದುಕಿನ ಚರಿತ್ರೆ ಮತ್ತು ಧಾರ್ಮಿಕ ಸಾಧನೆಗಳು ಭಾರತೀಯ ಸಾಮಾಜಿಕ ಮತ್ತು ಧಾರ್ಮಿಕ ಚರಿತ್ರೆಯಲ್ಲಿ ಮಹತ್ವಪೂರ್ಣ ಸ್ಥಾನ ಪಡೆದಿವೆ. ಕನ್ನಡ ಭಾಷೆಯಲ್ಲಿ ಇವರ ಬದುಕು ಮತ್ತು ತತ್ವಗಳನ್ನು ವಿವರಿಸುವ ಹಲವು ಪುರಾಣಗಳು ಮತ್ತು ಗ್ರಂಥಗಳಿವೆ. ಕೆಲವೊಂದು ಕಾದಂಬರಿಗಳು ಇವರನ್ನು ಪರಮಶಿವನ ಅವತಾರ ಎಂದು ಗುರುತಿಸುತ್ತವೆ ಎಂದರು.



ಕಾರ್ಜುವಳ್ಳಿ ಮಠಾಧೀಶ ಶ್ರೀ ಸದಾಶಿವ ಸ್ವಾಮೀಜಿ ಮಾತನಾಡಿ, ರೇಣುಕಾಚಾರ್ಯರು ಋಷಿಗಳ ಜೊತೆಯಲ್ಲಿ ನಿರಂತರ ಜ್ಞಾನ ಸಾಧನೆ ನಡೆಸಿ, ಶೈವ ತತ್ವಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಲಿಂಗಾಯತ ಧರ್ಮದ ಮೂಲತ: ಸಿದ್ಧಾಂತಗಳನ್ನು ಪ್ರತಿಪಾದಿಸಲು ಮತ್ತು ಶೈವ ಪರಂಪರೆಯನ್ನು ಬಲಪಡಿಸಲು ತಮ್ಮ ಜೀವನವನ್ನು ಮೀಸಲಾಗಿಟ್ಟಿದ್ದರು ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಮಾತನಾಡಿ, ಇಷ್ಟಲಿಂಗ ಧಾರಣೆಯ ಮೂಲಕ ಭಗವಂತನನ್ನು ವೈಯಕ್ತಿಕ ಅನುಭವದ ಮೂಲಕ ಅರಿತುಕೊಳ್ಳಬೇಕೆಂಬ ತತ್ವವನ್ನು ಜಗದ್ಗುರುಗಳು ಪ್ರಚಾರ ಮಾಡಿದರು. ಪರಮಶಿವನ ಆರಾಧನೆಗೆ ರೂಪಕ, ಕರ್ಮಕಾಂಡಗಳನ್ನು ತೊರೆದು ಶುದ್ಧ ಮನಸ್ಸಿನಿಂದ ತತ್ವವನ್ನು ಅಭಿವೃದ್ಧಿ ಮಾಡಿದರು ಎಂದರು.

ಹೆಚ್.ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕ ಜಗದೀಶ್ ಕಬ್ಬಿನಹಳ್ಳಿ ಮಾತನಾಡಿ, ರೇಣುಕಾಚಾರ್ಯರು ಅವಮಾನಿತ ವರ್ಗಗಳನ್ನು ಪ್ರೀತಿಸಿ, ಅವರಿಗೆ ತತ್ವಶಾಸ್ತ್ರದ ಮತ್ತು ಧಾರ್ಮಿಕ ಶಿಕ್ಷಣವನ್ನು ನೀಡಿದರು. ಸಮಾನತೆ ಎಂಬ ತತ್ವಕ್ಕೆ ಮಹತ್ವ ನೀಡಿದರು. ಎಲ್ಲ ವರ್ಣಗಳೂ ಸಮಾನವೆಂಬ ನಂಬಿಕೆಯನ್ನು ಹರಡಿದರು ಎಂದರು.

ರೇಣುಕಾಚಾರ್ಯರ ಭಾವಚಿತ್ರವನ್ನು ಅಲಂಕರಿಸಿದ ವಾಹನದಲ್ಲಿ, ಸೆಸ್ಕ್ ವೃತ್ತದಿಂದ ಕಲ್ಯಾಣ ಮಂಟಪದವರೆಗೆ ಮೆರವಣಿಗೆ ಮಾಡಲಾಯಿತು. ಸಮಾರಂಭದಲ್ಲಿ ಡಾ. ಜಯರಾಜ್, ಉಮಾ ರವಿಪ್ರಕಾಶ್, ಎಸ್. ಎಸ್. ಶಿವಮೂರ್ತಿ, ಕಟ್ಟೆಗದ್ದೆ ನಾಗರಾಜ್, ಟೀಕರಾಜ್ ಮತ್ತು ವೀರಶೈವ ಮುಖಂಡರು ಉಪಸ್ಥಿತರಿದ್ದರು.

# ನುಗ್ಗೇಹಳ್ಳಿಯಲ್ಲಿ ಸಂಭ್ರಮದ ಬ್ರಹ್ಮ ರಥೋತ್ಸವ

■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ನುಗ್ಗೇಹಳ್ಳಿ ಗ್ರಾಮದ ಪುರಾಣ ಪ್ರಸಿದ್ಧ ಶ್ರೀ ಸದಾಶಿವಸ್ವಾಮಿಯ ಬ್ರಹ್ಮ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವದ ಪ್ರಯುಕ್ತ ಶ್ರೀ ಸದಾಶಿವಸ್ವಾಮಿ ದೇವಾಲಯಕ್ಕೆ ಹಸಿರು ಚಪ್ಪರ ಹಾಕಲಾಗಿದ್ದು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಮುಂಜಾನೆಯಿಂದಲೇ ಪೂಜಾ ವಿಧಿ ವಿಧಾನಗಳು ಪ್ರಾರಂಭಗೊಂಡಿದ್ದು ವಿವಿಧ ಅಭಿಷೇಕ, ಹೂವಿನ ಅಲಂಕಾರ ಹಾಗೂ ರಾಜಬೀದಿಗಳಲ್ಲಿ ಶ್ರೀ ಸ್ವಾಮಿಯ ಅಡ್ಡಪಲ್ಲಕ್ಕಿ ಉತ್ಸವ ನಡೆಯಿತು.



ರಥದ ಸುತ್ತ ದೇವರ ಪ್ರದಕ್ಷಣೆ ನಡೆಸಿದ ನಂತರ ಮೂರ್ತಿಯನ್ನು ರಥದ ಮೇಲೆ ಪ್ರತಿಷ್ಠಾಪಿಸಲಾಯಿತು. ವಿಧಿ ವಿಧಾನದಂತೆ ಪೂಜೆಗಳು ನೆರವೇರಿದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ರಥೋತ್ಸವ ಸಾಗಿದಂತೆಲ್ಲ ಭಕ್ತರು ಹೂವು, ಧವನ ಎಸೆದರು. ಈಡುಗಾಯಿ ಒಡೆದರು. ಬೆಂಗಳೂರು ಸೇರಿದಂತೆ ರಾಜ್ಯದ ಅನೇಕ ಭಾಗಗಳ ಭಕ್ತರು ಪಾಲ್ಗೊಂಡಿದ್ದು ದೇವರ ದರ್ಶನ ಪಡೆದು ಪುನೀತರಾದರು.

ರಥೋತ್ಸವ ಅಂಗವಾಗಿ ಪ್ರತಿದಿನ ದೇವಾಲಯದಲ್ಲಿ ವಿಶೇಷ ಪೂಜೆ ಅಭಿಷೇಕ ರಾತ್ರಿ ದೇವರ ಉತ್ಸವ ನಡೆಯುತ್ತಿದೆ. ಶ್ರೀ ಸದಾಶಿವಸ್ವಾಮಿ ಸೇವಾ ಸಮಿತಿ ಹಾಗೂ ಭಕ್ತರ ಸಹಕಾರದಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ರಥೋತ್ಸವದಲ್ಲಿ ಪುರವರ್ಗ ಹಿರೇಮಠದ ಡಾ. ಮಹೇಶ್ವರ ಸ್ವಾಮೀಜಿ, ಶ್ರೀ ಸದಾಶಿವಸ್ವಾಮಿ ಸೇವಾ ಸಮಿತಿ ಅಧ್ಯಕ್ಷ ಎನ್.ಡಿ. ಕುಮಾರಸ್ವಾಮಿ, ವೀರಶೈವ ಸಮಾಜದ ಹೋಬಳಿ ಅಧ್ಯಕ್ಷ ಎನ್. ಎಸ್. ಗಿರೀಶ್, ರಾಜ್ಯ ಯುವ ಕಾಂಗ್ರೆಸ್ ಘಟಕದ ಕಾರ್ಯದರ್ಶಿ ಶಶಾಂಕ್ ಗೋಪಾಲಸ್ವಾಮಿ, ಆಗಮಿಕರಾದ ರಘು ಶರ್ಮಾ ಮಠಮುದ್ರೆ, ಪ್ರಧಾನ ಅರ್ಚಕ ರಘು ದೀಕ್ಷಿತ್, ಸಮಿತಿ ಗೌರವಾಧ್ಯಕ್ಷ ಎನ್.ಟಿ. ಸಿದ್ದಪ್ಪ, ಸಂಚಾಲಕ ಬಾಬು ಪ್ರಸಾದ್, ನಾಗರಿಕ ವೇದಿಕೆ ಅಧ್ಯಕ್ಷ ತೋಟಿ ನಾಗರಾಜ್, ಗ್ರಾಪಂ ಸದಸ್ಯರಾದ ಹೊನ್ನೇಗೌಡ, ರಮ್ಯಾ ಲೋಕೇಶ್ ಹಾಗೂ ಇತರರಿದ್ದರು.

# ಮಾ. 23, 24ಕ್ಕೆ ಬಳ್ಳಾರಿಯಲ್ಲಿ ಸಮಾವೇಶ

■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಖಿಲ ಭಾರತ ಯುವ ಜನ ಫೆಡರೇಷನ್‌ನ 11ನೇ ರಾಜ್ಯ ಸಮ್ಮೇಳನ ಮಾ. 23 ಹಾಗೂ 24 ರಂದು ಬಳ್ಳಾರಿಯಲ್ಲಿ ನಡೆಯಲಿದೆ ಎಂದು ಫೆಡರೇಷನ್ ಜಿಲ್ಲಾ ಕಾರ್ಯದರ್ಶಿ ಎಲ್.ಬಿ. ಗಿರೀಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯಿಂದ 7 ಪ್ರತಿನಿಧಿಗಳು ರಾಜ್ಯ ಸಮ್ಮೇಳನದಲ್ಲಿ ಭಾಗಿಯಾಗಲಿದ್ದಾರೆ. ನಿರುದ್ಯೋಗ, ಬಡತನ, ಹಸಿವು ನೀಗಿಸುವ ಸಂಬಂಧ ಹೋರಾಟ ರೂಪಿಸುವ ಕುರಿತು ಸಮ್ಮೇಳನದಲ್ಲಿ ಚರ್ಚಿಸಲಾಗುವುದು. ಸಂವಿಧಾನ ಉಳಿಸಲು, ಸೌಹಾರ್ದತೆ ಬೆಳೆಸಲು, ಸಮ ಸಮಾಜ ಕಟ್ಟಲು ಯುವಕ-ಯುವತಿಯರನ್ನು ಜಾಗೃತಿಗೊಳಿಸುವುದೂ ಸೇರಿ ಹಲವು ವಿಚಾರಗಳ ಕುರಿತು ಮಂಥನ ನಡೆಯಲಿದೆ ಎಂದರು.

ಜಿಲ್ಲೆಯಲ್ಲೂ ನೂತನ ಸಮಿತಿ ಅಸ್ತಿತ್ವಕ್ಕೆ ಬಂದಿದ್ದು, ಜಿಲ್ಲಾಧ್ಯಕ್ಷರಾಗಿ ಸಂತು ಸಕಲೇಶಪುರ, ಜಿಲ್ಲಾ ಕಾರ್ಯದರ್ಶಿಯಾಗಿ ಎಲ್.ಬಿ. ಗಿರೀಶ್, ಉಪಾಧ್ಯಕ್ಷರಾಗಿ ಪಿ. ಹೇಮಂತ್, ಖಜಾಂಚಿಯಾಗಿ ಭುವನೇಶ್ವರಿ, ಸಹಕಾರ್ಯದರ್ಶಿಯಾಗಿ ಸಚಿನ್, ಸಾಗರ್ ಮತ್ತು 7 ಕಾರ್ಯಕಾರಿ ಸಮಿತಿ ಸದಸ್ಯರು ಆಯ್ಕೆಯಾಗಿದ್ದಾರೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಪುಷ್ಪಲತಾ, ಭುವನ, ಹೇಮಂತ್, ಸಚಿನ್ ಇದ್ದರು.

# ಮಾರ್ಚ್‌ನಲ್ಲಿ ಪಡಿತರದಾರರಿಗೆ 15 ಕೆ.ಜಿ. ಅಕ್ಕಿ

■ **ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ಪಡಿತರದಾರರಿಗೆ ಮಾರ್ಚ್‌ನಲ್ಲಿ ಪ್ರತಿ ಸದಸ್ಯರಿಗೆ 15 ಕೆ.ಜಿ. ಅಕ್ಕಿಯನ್ನು ವಿತರಣೆ ಮಾಡಲಾಗುತ್ತಿದ್ದು, ಕಡ್ಡಾಯವಾಗಿ ನ್ಯಾಯಬೆಲೆ ಅಂಗಡಿಗಳಲ್ಲಿ ಕೇಳಿ ಪಡೆದುಕೊಳ್ಳಬೇಕೆಂದು ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಪಿ. ಶ್ರೀಧರ್‌ಗೌಡ ಮನವಿ ಮಾಡಿದರು.



ತಾಲ್ಲೂಕಿನ ಮಲ್ಲಿಪಟ್ಟಣ ಸರ್ಕಾರಿ ನ್ಯಾಯಬೆಲೆ ಅಂಡಿಯಲ್ಲಿ ಗುರುವಾರ ಬಿಪಿಎಲ್ ಕಾರ್ಡ್‌ದಾರರಿಗೆ ಅಕ್ಕಿ ವಿತರಣೆ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಸರ್ಕಾರ ನುಡಿದಂತೆ ಪಂಚ ಗ್ಯಾರಂಟಿಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತಂದಿದೆ. ಪಡಿತರ ವಿತರಣೆಗೆ ನೀಡಿದ 10 ಕೆ.ಜಿ. ಅಕ್ಕಿ ವಿತರಣೆಗೆ ಕೇಂದ್ರ ಸರ್ಕಾರದಿಂದ ಸಹಕಾರ ಸಿಕ್ಕಿರಲಿಲ್ಲ. ಈ ಸಲುವಾಗಿ ಪ್ರತಿ ಪಡಿತರರಿಗೆ 5 ಕೆ.ಜಿ. ಅಕ್ಕಿ ಮತ್ತು 170 ರೂ. ಹಣ ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಆಗುತ್ತಿತ್ತು. ಪ್ರಸ್ತುತ ಕೇಂದ್ರದಿಂದ ಅಕ್ಕಿ ಖರೀದಿ ಮಾಡಿ ನೀಡಿದ ಮಾತಿನಂತೆ 10 ಕೆ.ಜಿ. ಅಕ್ಕಿಯನ್ನು ವಿತರಣೆ ಮಾಡಲಾಗುತ್ತಿದೆ. ಅಲ್ಲದೆ ಕಳೆದ ತಿಂಗಳ ಬಾಕಿ ಅಕ್ಕಿ ಸೇರಿ ಪ್ರಸ್ತುತ ತಿಂಗಳ ಪಡಿತರರಿಗೆ 15 ಕೆ.ಜಿ. ಅಕ್ಕಿ ದೊರೆಯುತ್ತಿದೆ. ಮುಂದಿನ ತಿಂಗಳಿಂದ 10 ಕೆ.ಜಿ. ಅಕ್ಕಿ ದೊರೆಯುವುದರಿಂದ ಹಣ ಸ್ಥಗಿತಗೊಳ್ಳಲಿದೆ ಎಂದು ಹೇಳಿದರು.

ಪ್ರಮುಖವಾಗಿ ಅಂತ್ಯೋದಯ ಪಡಿತರ ಚೀಟಿಗೆ ಒಂದರಿಂದ 3 ಮಂದಿಗೆ 35 ಕೆ.ಜಿ. ಅಕ್ಕಿ, 4 ಸದಸ್ಯರಿರುವ ಕಾರ್ಡ್‌ಗೆ 45 ಕೆ.ಜಿ. 5 ಸದಸ್ಯರಿರುವ ಕಾರ್ಡ್‌ಗೆ 65 ಕೆಜಿ, 6 ಸದಸ್ಯರಿರುವ ಕಾರ್ಡ್‌ಗೆ 85 ಕೆಜಿ,7 ಸದಸ್ಯರಿಗೆ 105 ಕೆಜಿ, 8 ಮಂದಿಗೆ 125 ಕೆಜಿ, 9 ಮಂದಿಗೆ 145 ಕೆಜಿ, 10 ಮಂದಿಗೆ 165 ಕೆಜಿ, 11ಕ್ಕೆ 185 ಕೆಜಿ ಮತ್ತು 12 ಮಂದಿ ಇರುವ ಕಾರ್ಡ್‌ಗೆ 205 ಕೆಜಿ ಅಕ್ಕಿ ದೊರೆಯಲಿದೆ. ಅದೇ ರೀತಿ ಬಿಪಿಎಲ್ ಕಾರ್ಡ್‌ನ ಪ್ರತಿಯೊಬ್ಬರಿಗೂ ತಲಾ 15 ಕೆಜಿ ಅಕ್ಕಿ ಸಿಗಲಿದೆ. ಕಡ್ಡಾಯವಾಗಿ ಸರ್ಕಾರ ನಿಗದಿಮಾಡಿರುವ ಪಡಿತರವನ್ನು ಕೇಳಿ ಪಡೆದುಕೊಳ್ಳಬೇಕು. ನ್ಯಾಯಬೆಲೆ ಅಂಗಡಿ ಮಾಲೀಕರು ಕೂಡ ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕು. ಯಾವುದೇ ರೀತಿಯ ಹಣವನ್ನು ಕೊಡುವಂತಿಲ್ಲ. ಮತ್ತೆ ಅಕ್ಕಿಯನ್ನು ಸಹ ಹಿಡಿಯುವಂತಿಲ್ಲ. ಈ ಯಾವುದೇ ಲೋಪ ಕಂಡುಬಂದರೇ ನೇರವಾಗಿ ಗ್ರಾಹಕರು ದೂರು ನೀಡಬಹುದಾಗಿದೆ ಎಂದು ತಿಳಿಸಿದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಬಿ.ಸಿ. ರಾಜೇಶ್, ಸೋಮಶೇಖರ್, ಆಟೋ ಧರ್ಮ, ಆಹಾರ ಇಲಾಖೆ ಅಧಿಕಾರಿ ಮಂಜುನಾಥ್ ಇತರರು ಇದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248